# ಲಡಾಕ್‌ನಲ್ಲಿ ಕೆಣಕಿದ ಭರಾಲ್

ಪ್ರಮೋದ್ ವಿಶ್ವನಾಥ್



ಹಿಮಾಲಯಕ್ಕೆ ಅದು ನನ್ನ ಮೊದಲ ಪ್ರವಾಸ. ಪ್ಯಾಂಗಾಂಗ್ ಸರೋವರದಿಂದ ಚಾಂಗ್ಲಾ ಪಾಸ್ ಮೂಲಕ ಗೆಳೆಯರ ಜತೆಗೂಡಿ ಲಡಾಕ್‌ಗೆ ಹೋಗುತ್ತಿದ್ದೆವು. ಪ್ಯಾಂಗಾಂಗ್ ಸರೋವರ ಸಮುದ್ರ ಮಟ್ಟಕ್ಕಿಂತ 14,000 ಅಡಿ ಎತ್ತರದಲ್ಲಿದೆ. ಅಲ್ಲಿ ಭಯಂಕರ ಚಳಿ. ನೆಲಮಟ್ಟದಲ್ಲೇ ಸಂಪೂರ್ಣ ಮೋಡ ಆವರಿಸಿಕೊಂಡಿತ್ತು. ಎಷ್ಟರ ಮಟ್ಟಿಗೆ ಎಂದರೆ, ಸರೋವರವನ್ನು ನಾವು ಸರಿಯಾಗಿ ನೋಡಲೂ ಆಗುತ್ತಿರಲಿಲ್ಲ. ವಾಸ್ತವವಾಗಿ, ಕೋಬಾಲ್ಟ್ ಹೆಚ್ಚು ಸಂಗ್ರಹವಾಗಿರುವ ಆ ಕೆರೆಯ ಬಣ್ಣ ಹಸಿರು ಮಿಶ್ರಿತ ನೀಲಿ. ಆ ವಿಶಿಷ್ಟ ಸರೋವರ, ಅದರ ವಿಶಿಷ್ಟ ಬಣ್ಣವನ್ನು ನೋಡಬೇಕೆಂಬ ಕಾತರ ನಮ್ಮದು. ಅದಕ್ಕಾಗಿಯೇ ಆ ಚಳಿಯಲ್ಲಿ ನಾವು ಸುಮಾರು ಆರರಿಂದ ಏಳು ಗಂಟೆ ಕಾದು ಕುಳಿತೆವು. ಮೋಡಗಳೇ ದೂರ ಸರಿಯಿರಿ ಎಂದು ಕೋರಿಕೊಂಡೆವು. ಒಂದು ಕ್ಷಣ... ಆ ಹಸಿರನೀಲ ಬಣ್ಣದ ನೀರಿನ ಹೊಳಪನ್ನು ನೋಡಿದೆವು. ಅಷ್ಟೇ.. ಮತ್ತೆ ಮೋಡಗಳ ರಾಶಿ.

ಭ್ರಮನಿರಸನಗೊಂಡ ನಾವು ಮರಳಿ ಲೇಹ್‌ನಲ್ಲಿರುವ ಬೇಸ್‌ಕ್ಯಾಂಪ್‌ಗೆ ಮರಳಿದೆವು. ಆಗ ಸಂಜೆ 6 ಗಂಟೆಯಾಗಿದ್ದಿರಬಹುದು. ಬೆಟ್ಟದ ಮೇಲೆ ಸೂರ್ಯನ ಕಿರಣಗಳು ಬೀಳುತ್ತಿದ್ದು, ಚಿನ್ನದ ಲೇಪನ ಕೊಟ್ಟ ಹಾಗೆ ಕಾಣುತ್ತಿತ್ತು. ನಾನು ಮತ್ತು ಗೆಳೆಯ ಶ್ರೀಹರ್ಷ ಕ್ವಾಲಿಸ್ ಕಾರಿನಲ್ಲಿ ತೆರಳುತ್ತಿದ್ದೆವು. ಒಂದು ತಿರುವಿನಲ್ಲಿ ಹೋಗುತ್ತಿದ್ದಾಗ ಏಕಾಏಕಿ ಭರಾಲ್‌ಗಳನ್ನು ನೋಡಿದೆವು. (ಇದು ಕುರಿಗಳ ಜಾತಿಯ ಪ್ರಾಣಿ) ಭರಾಲ್‌ಗಳ ಗುಂಪೊಂದು ರಸ್ತೆ ದಾಟುತ್ತಿತ್ತು. ತಕ್ಷಣ ಜೀಪು ನಿಲ್ಲಿಸಿದೆವು. ಅತ್ಯಂತ ಹತ್ತಿರದಿಂದ ಭರಾಲ್‌ಗಳನ್ನು ನೋಡುವ ಅವಕಾಶ ಅದು.



ನಾವಂತೂ ಥ್ರಿಲ್ ಆಗಿಬಿಟ್ಟೆವು. ನಮ್ಮನ್ನು ನೋಡಿದ ತಕ್ಷಣ ಅವು ಬೆಟ್ಟ ಏರಲು ಆರಂಭಿಸಿದವು. ಸುಮಾರು 300-400 ಮೀಟರ್ ಎತ್ತರಕ್ಕೆ ಏರಿದವು.

ಅಲ್ಲಿಯೋ ಆಮ್ಲಜನಕ ಪ್ರಮಾಣ ಭಾರಿ ಕಡಿಮೆ ಇತ್ತು. ನಮ್ಮದು ಉಸಿರಾಟವಲ್ಲ. ಏದುಸಿರಾಟ... ಒಂದು ಹೆಜ್ಜೆ ಮುಂದೆ ಇಟ್ಟರೂ ಸುಸ್ತಾಗಿಬಿಡುತ್ತಿತ್ತು. ಸಾಕಾಗುವಷ್ಟು ಆಕ್ಸಿಜನ್ನೇ ಇಲ್ಲ. ನಾನು ಮತ್ತು ಹರ್ಷ ಕಾರಿನಿಂದ ಕೆಳಗಿಳಿದು ಬೆಟ್ಟ ಏರಲು ಹೋದೆವು. ನನ್ನ ಮುಖ್ಯ ಉದ್ದೇಶ ಭರಾಲ್‌ಗಳ ಸೊಬಗನ್ನು ಸೆರೆಹಿಡಿಯುವುದು. 300ಎಫ್ 2.8 ಟೆಲಿಫೋಟೋ ಲೆನ್ಸ್‌ನ್ನು ಕ್ಯಾಮೆರಾಕ್ಕೆ ಸಿಲುಕಿಸಿ ಬೆಟ್ಟ ಹತ್ತಿದೆ. ಊಹು, ಭರಾಲ್‌ನಷ್ಟು ಸಲೀಸಾಗಿ ಏರಲಾಗಲಿಲ್ಲ. ಉಸಿರಾಡಲಾಗದೆ ಕೆಮ್ಮಲು ಶುರು ಮಾಡಿದೆ. ಬಳಲಿ ಒಂದು ಕಡೆ ಕುಳಿತೆ. ಒಂದು ಹೆಜ್ಜೆ ನಡೆಯಲೂ ಆಗಲಿಲ್ಲ. ಅತ್ತ ನೋಡಿದರೆ ಹರ್ಷ 50 ಮೀಟರ್ ದೂರ ಇದ್ದರು. ಅವರ ಎಡಗಡೆ ನಿಂತುಕೊಂಡಿದ್ದ ಭರಾಲ್‌ಗಳು ನನ್ನನ್ನೇ ಅಣಕಿಸುವಂತೆ ನೋಡುತ್ತಿದ್ದವು. 'ಬೆಟ್ಟ ಹತ್ತೋದು ಅಷ್ಟೊಂದು ಸುಲಭಾನಾ?' ಅಂತ ಗೇಲಿ ಮಾಡುತ್ತಿದ್ದವೇನೋ? ನನಗೋ, ಈ ಬೆಟ್ಟ ಮತ್ತು ಆ ಪ್ರಾಣಿ ಮುಂದೆ ತೀರಾ ಚಿಕ್ಕವನು ಎನ್ನಿಸತೊಡಗಿತು. ಕುಳಿತಲ್ಲೇ ಫೋಟೋ ಕ್ಲಿಕ್ಕಿಸತೊಡಗಿದೆ... ಆ ಭರಾಲ್‌ಗಳ ಚಿತ್ರವನ್ನು ನೀವೂ ನೋಡಿ.

ಈ ಅದ್ಭುತ ಪ್ರಕೃತಿ ಮುಂದೆ ನಾವೆಷ್ಟು ಚಿಕ್ಕವರಲ್ಲವೇ? ಇಷ್ಟಾದರೂ ಈ ಜಗದ ಒಡೆಯರು ನಾವೇ ಎಂದು ಭ್ರಮಿಸಿಕೊಳ್ಳುತ್ತೇವಲ್ಲ?

*(ಲೇಖಕರದು ಡಬಲ್ ರೋಲ್. ಒಂದು ಕಡೆ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯಮಿ. ಇನ್ನೊಂದು ಕಡೆ ನಿಸರ್ಗ ಛಾಯಾಗ್ರಾಹಕರು. ಅದರಲ್ಲೂ ಲ್ಯಾಂಡ್‌ಸ್ಕೇಪ್ ಫೋಟೋದಲ್ಲಿ ಪರಿಣಿತರು. ಇವರು ಗೆಳೆಯರ ಜತೆಗೂಡಿ ಲ್ಯಾಂಡ್‌ಸ್ಕೇಪ್ ವಿಝರ್ಡ್ಸ್ ಎಂಬ ಸಂಸ್ಥೆ ಕಟ್ಟಿಕೊಂಡಿದ್ದಾರೆ. ದೇಶ ವಿದೇಶ ಸುತ್ತುವ ಪ್ರಮೋದ್ ತೆಗೆದ ಚಿತ್ರ ನೋಡಬೇಕಾದರೆ ಭೇಟಿ ನೀಡಿ:*
**(http://www.framesfromwild.com)**